# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1285/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 11/11/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಸೈಯದ್ ಅಹ್ಮದುಲ್ಲಾ ತಂದೆ ಸೈಯದ್ ಅಸದುಲ್ಲಾ, ಸಹಾಯಕ ಖಜಾನೆ ಅಧಿಕಾರಿ ಪ್ರಭಾರ ಸಹಾಯಕ ನಿರ್ದೇಶಕರು, ಉಪ-ಖಜಾನೆ ಕಛೇರಿ ಬಸವಕಲ್ಯಾಣ, ಜಿ: ಬೀದರ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ಆರಕ್ಷಕ ನಿರೀಕ್ಷಕರು, ಬೀದರ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಸಲ್ಲಿಸಿದ ವರದಿಯಲ್ಲಿ ಶ್ರೀ ಸೈಯದ್ ಅಹ್ಮದುಲ್ಲಾ ತಂದೆ ಸೈಯದ್ ಅಸದುಲ್ಲಾ, ಸಹಾಯಕ ಖಜಾನೆ ಅಧಿಕಾರಿ ಪ್ರಭಾರ ಸಹಾಯಕ ನಿರ್ದೇಶಕರು, ಉಪ-ಖಜಾನೆ ಕಛೇರಿ ಬಸವಕಲ್ಯಾಣ, ಜಿ: ಬೀದರ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದೂರುದಾರರಾದ ಶ್ರೀ ಗುಂಡಪ್ಪ ತಂದೆ ಚಂದ್ರಪ್ಪಾ ಸೋಲಾಪುರೆ, ಸಾ: ಕೌಡಿಯಾಳ ಗ್ರಾಮ, ಸದ್ಯ ತ್ರಿಪುರಾಂತ ಬಸವಕಲ್ಯಾಣ, ತಾ: ಬಸವಕಲ್ಯಾಣ, ಜಿ: ಬೀದರ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ಸಾರಾಂಶ:-

i. ದೂರುದಾರರು ಕಳೆದ ಐದು ವರ್ಷಗಳಿಂದ ವಲಯ ಅರಣ್ಯಾಧಿಕಾರಿಗಳ ಕಾರ್ಯಾಲಯ, ಪ್ರಾದೇಶಿಕ ವಲಯ, ಬಸವಕಲ್ಯಾಣದಲ್ಲಿ ಲಿಪಿಕ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಸದರಿ ಕಛೇರಿಯಲ್ಲಿ ದೂರುದಾರರು ವೇತನ ಶಾಖೆಯನ್ನು ಸಹ ನಿರ್ವಹಿಸುತ್ತಿದ್ದು ವೇತಕ್ಕೆ ಸಂಬಂಧಪಟ್ಟ ಎಲ್ಲಾ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದು ಹೀಗಿರುವಾಗ ಸರ್ಕಾರದ ಆದೇಶ ಸಂಖ್ಯೆ : ಅಪಜಿ:132:ಆಆಸೇ:99, ಬೆಂಗಳೂರು ದಿ: 17/05/2000 ರಂತೆ ಹಾಗೂ ವಲಯ ಅರಣ್ಯಾಧಿಕಾರಿಗಳು ಬಸವಕಲ್ಯಾಣ ರವರ ಅಧೀಕೃತ ಜ್ಞಾಪನಾ ಪತ್ರ ಸಂಖ್ಯೆ ವಅ :ಪ್ರಾ: ಬಕ.ಸಿಬ್ಬಂದಿ: ಸಾರ್ವತ್ರಿಕ:ರಜಾ:ಸಂಬಳ:ಸಿಆರ್: 2017-18 ದಿ: 22/01/2018 ರ ಆದೇಶದಂತೆ 2017-18 ನೇ ಸಾಲಿನ ಸಾರ್ವತ್ರಿಕ ದಿನಗಳಲ್ಲಿ ಸದರಿ ರಜೆಗಳು ಉಪಯೋಗಿಸದೇ ಕರ್ತವ್ಯ ನಿರ್ವಹಿಸಿದ ಸಿಬ್ಬಂಧಿಗಳು ಸಾರ್ವತ್ರಿಕ ರಜಾ ದಿನಗಳಲ್ಲಿ ಸದರಿ ರಜೆಗಳನ್ನು ಉಪಯೋಗಿಸದೆ ಕರ್ತವ್ಯ ನಿರ್ವಹಿಸಿದ ಸಿಬ್ಬಂಧಿಗೆ ಸಾರ್ವತ್ರಿಕ ರಜಾ (30) ದಿನಗಳ ಸಂಬಳ ಪಾವತಿಸಲು ಆದೇಶವಾಗಿದ್ದರಿಂದ ದೂರುದಾರರು ತಮ್ಮ ಕಛೇರಿಯ ಸಿಬ್ಬಂಧಿಗಳ ವೇತನದ ಬಿಲ್ಲನ್ನು ದಿ: 30/01/2018 ರಂದು ಸಿದ್ಧಪಡಿಸಿಕೊಂಡು ದಿ: 31/01/2018 ರಂದು ಉಪಖಜಾನೆ, ಬಸವಕಲ್ಯಾಣರವರಲ್ಲಿ ಸಲ್ಲಿಸಿದ್ದು ಉಪಖಜಾನೆ ಬಸವಕಲ್ಯಾಣರವರು ಟೋಕನ್ ಸಂಖ್ಯೆ ಔಆ 0 1663762 ನೇದ್ದನ್ನು ನೀಡಿರುತ್ತಾರೆ. ದೂರುದಾರರು ಸದರಿ ಬಿಲ್ಲುಗಳನ್ನು ಸಲ್ಲಿಸುವಾಗ ಎದುರುದಾರ್‌ರವರು ಬಸವಕಲ್ಯಾಣ ಉಪಖಜಾನೆಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ದೂರುದಾರರಿಗೆ ಸದರಿ ಬಿಲ್ಲು ಎಷ್ಟು ಸಿಬ್ಬಂದಿಯವರದು ಇರುತ್ತದೆ ಎಂದು ವಿಚಾರಿಸಿದಾಗ ದೂರುದಾರರು ಏಳು ಜನ ಸಿಬ್ಬಂಧಿಯವರದು ಇರುತ್ತದೆ ಎಂದಾಗ ಎದುರುದಾರರು ಪ್ರತಿಯೊಬ್ಬರಿಂದ ರೂ. 1,000/-

ದಂತೆ ಒಟ್ಟು 7,000/- ರೂ.ಗಳನ್ನು ಜಮಾ ಮಾಡಿ ತಂದುಕೊಟ್ಟರೆ ಚೆಕ್ ಪಾಸ್ ಮಾಡುತ್ತೇನೆ ಅಂತ ತಿಳಿಸಿರುತ್ತಾರೆ. ಆಗ ದೂರುದಾರರು ಅಷ್ಟೊಂದು ಹಣ ಯಾವ ಕಾರಣಕ್ಕಾಗಿ ಕೊಡಬೇಕು ಮತ್ತು ಇದರ ಕುರಿತು ರಸೀದಿ ವಗೈರೆ ಏನಾದರೂ ಕೊಡುತ್ತೀರಾ ಎಂದು ಕೇಳಿದಾಗ ಸದರಿ ಹಣಕ್ಕೆ ಯಾವುದೇ ರಸೀದಿ ಇರುವುದಿಲ್ಲವೆಂದು, ಅಷ್ಟು ಹಣ ನೀಡಿದರೆ ಮಾತ್ರ ಬೇಗನೆ ಚೆಕ್ ಪಾಸ್ ಮಾಡಿ ಕೊಡ್ತೀನಿ ಅಂತ ಎದುರುದಾರರು ತಿಳಿಸಿರುತ್ತಾರೆ. ಆಗ ದೂರುದಾರರು ಆಯಿತು ಸರ್, ಎಂದು ಹೊರ ಬಂದಿರುತ್ತಾರೆ. ದೂರುದಾರರಿಗೆ ಕಛೇರಿಯ ಸಿಬ್ಬಂಧಿಯವರಿಂದ ಹಣ ಜಮಾ ಮಾಡಿ ಲಂಚವಾಗಿ ಎದುರುದಾರರಿಗೆ ಕೊಡಲು ಇಷ್ಟವಿಲ್ಲದ್ದರಿಂದ ದೂರುದಾರರು ಸಿಬ್ಬಂಧಿಯವರಿಂದ ಹಣ ಜಮಾ ಮಾಡಿರುವುದಿಲ್ಲ.

ii. ದಿನಾಂಕ 06/02/2018 ರಂದು ದೂರುದಾರರು ಎದುರುದಾರರ ಕಛೇರಿಯಲ್ಲಿ ಭೇಟಿಯಾಗಿ ತಮ್ಮ ಕಛೇರಿಯ ಸ್ಟಾಫ್‌ನ ಎಕ್ಸಟ್ರಾ ಸ್ಯಾಲರಿ ಏನಾಯಿತು ಎಂದು ವಿಚಾರಿಸಿದಾಗ ಎದುರುದಾರರು ಇನ್ನೂ ಆಗಿಲ್ಲ ಎಂದು ಹೇಳಿರುತ್ತಾರೆ. ಆಗ ದೂರುದಾರರು ಯಾವಾಗ ಆಗುತ್ತದೆ ಸರ್ ಎಂದಾಗ ಎದುರುದಾರರು ಮತ್ತೊಮ್ಮೆ ದೂರುದಾರರಿಗೆ ಎಷ್ಟು ಜನರದು ಎಂದು ಕೇಳಿದಾಗ ದೂರುದಾರರು ಏಳು ಜನರದು ಅದ ಸರ್ ಎಂದು ಹೇಳಿದಾಗ ಎದುರುದಾರರು ಆಯಿತು ಪ್ರತಿಯೊಬ್ಬರ ಕಡೆಯಿಂದ ರೂ. 1,000/- ದಂತೆ ಒಟ್ಟು 7,000/- ರೂ.ಗಳನ್ನು ತಂದುಕೊಡು ನಾಳೆಗೆ ಚೆಕ್ ಪಾಸ್ ಆಗ್ತದೆ ಎಂದು ತಿಳಿಸಿರುತ್ತಾರೆ. ಆಗ ದೂರುದಾರರು ಆಯಿತು ಸರ್ ಅಂತ ಹೊರಗೆ ಬಂದಿರುತ್ತಾರೆ. ದೂರುದಾರರು ಎದುರುದಾರರೊಂದಿಗೆ ನಡೆದ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ.

iii. ನ್ಯಾಯಯುತವಾದ ಕೆಲಸಕ್ಕೆ ಲಂಚದ ಹಣ ನೀಡಲು ದೂರುದಾರರಿಗೆ ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 09/02/2018 ರಂದು ಬೆಳಿಗ್ಗೆ

9–45 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಬೀದರ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರನ್ನು ನೀಡಿದ ಮೇಲೆ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 01/2018 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

iv. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಅನಿಲ್ ಬಿನ್ ಬಾಬುರಾವ್ ಚೆಲುವಾ ಮತ್ತು ಶ್ರೀ ಮಹಾಂತೇಶ ಬಿನ್ ಮಡೆಪ್ಪ ಮೋರೆ ಇವರನ್ನು ಬರಮಾಡಿಕೊಂಡು, ತನಿಖಾಧಿಕಾರಿಗಳು ಪಂಚರುಗಳ ಪರಿಚಯ ಮಾಡಿಕೊಂಡಿರುತ್ತಾರೆ ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ಪಂಚರುಗಳಿಗೆ ತನಿಖಾಧಿಕಾರಿಗಳು ನೀಡಿ ಅದರಲ್ಲಿರುವ ವಿಷಯವನ್ನು ಓದಿ ತಿಳಿದುಕೊಳ್ಳಲು ಸೂಚಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರು ಲಂಚ ಕೇಳಿದರೆ ಕೊಡಲೆಂದು ತಂದಿರುವ ಹಣವನ್ನು ಹಾಜರುಪಡಿಸುವಂತೆ ಕೇಳಿ ಪಡೆದುಕೊಂಡು ಆ ನೋಟುಗಳ ನಂಬರ್ ಮತ್ತು ಮೌಲ್ಯವನ್ನು ಪರಿಶೀಲಿಸಿ ಹೇಳುವಂತೆ ಪಂಚರಿಗೆ ನೀಡಿದ್ದು ಪಂಚರು ಪರಿಶೀಲಿಸಿ ನೋಡಿದಾಗ ರೂ. 2,000/– ಮುಖಬೆಲೆಯ 3 ನೋಟುಗಳು ಮತ್ತು 500/– ಮುಖಬೆಲೆಯ 2 ನೋಟುಗಳು ಒಟ್ಟು ರೂ. 7,000/– ಆಗಿರುತ್ತದೆ. ತನಿಖಾಧಿಕಾರಿಗಳ ಸೂಚನೆ ಮೇರೆಗೆ ರೂ.7,000/– ಮೌಲ್ಯದ ನೋಟುಗಳ ಎರಡೂ ಬದಿಗಳಿಗೆ ಸಿಬ್ಬಂದಿಯವರು ಫಿನಾಪ್ತಲಿನ್ ಪುಡಿಯ ಲೇಪನ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಪಂಚ ಸಾಕ್ಷಿ 2 ಮಹಾಂತೇಶರವರಿಂದ ದೂರುದಾರರ ಅಂಗ ಶೋಧನೆ ಮಾಡಿಸಿ ದೂರುದಾರರ ಶರ್ಟಿನ ಎಡ ಎದೆಯ ಜೇಬಿನಲ್ಲಿ ಯಾವುದೇ ವಸ್ತುಗಳು ಇರುವುದಿಲ್ಲವೆಂದು ಖಾತ್ರಿಪಡಿಸಿಕೊಂಡು ನಂತರ ಫಿನಾಪ್ತಲಿನ್ ಪುಡಿ ಲೇಪಿತ ಕರೆನ್ಸಿ ನೋಟುಗಳನ್ನು ಪಂಚ 2 ರವರಿಗೆ ಎಣಿಕೆ ಮಾಡಿ

ಪರಿಶೀಲಿಸುವಂತೆ ಹೇಳಿ ನೀಡಿದಾಗ ಅವರು ನೋಟುಗಳನ್ನು ಪರಿಶೀಲಿಸಿ ಎಣಿಕೆ ಮಾಡಿ ತನಿಖಾಧಿಕಾರಿಯವರ ಸೂಚನೆಯಂತೆ ಸದರಿ ನೋಟುಗಳನ್ನು ದೂರುದಾರರ ಶರ್ಟಿನ ಎಡ ಎದೆಯ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ 2 ಮಹಾಂತೇಶ್‌ರವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ದೂರುದಾರರು ಹಾಜರುಪಡಿಸಿದ ಧ್ವನಿ ಮುದ್ರಿಸಿಕೊಂಡ ಸಂಭಾಷಣೆಯುಳ್ಳ ಮೊಬೈಲ್‌ನ್ನು ತನಿಖಾಧಿಕಾರಿಯವರು ಪಂಚರ ಮುಂದೆ ನುಡಿಸಿ ಕೇಳಿಸಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ಕಂಡುಬರುತ್ತದೆ. ತನಿಖಾಧಿಕಾರಿಗಳು ತಮ್ಮ ಕಛೇರಿಯ ಅಲ್ಮೆರಾದಲ್ಲಿದ್ದ ವಾಯ್ಸ್ ರೆಕಾರ್ಡರನ್ನು ದೂರುದಾರರಿಗೆ ನೀಡಿ ದೂರುದಾರರು ಎದುರುದಾರರನ್ನು ಕಾಣಲು ಹೋದಾಗ ಲಂಚ ಕೊಡುವ ಸಮಯದಲ್ಲಿ ಅವರೊಂದಿಗೆ ನಡೆಯುವ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಳ್ಳಲು ತಿಳಿಸಿ ನಂತರ ತಾವು ಕೇಳಿದಾಗ ಹಾಜರುಪಡಿಸುವಂತೆ ತಿಳಿಸಿ ವಾಯ್ಸ್ ರೆಕಾರ್ಡರನ್ನು ಉಪಯೋಗಿಸುವ ವಿಧಿ ವಿಧಾನಗಳನ್ನು ತಿಳಿಸಿ ದೂರುದಾರರ ವಶಕ್ಕೆ ನೀಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಈ ಲಂಚದ ಹಣವನ್ನು ಎದುರುದಾರರು ಒತ್ತಾಯಪೂರ್ವಕವಾಗಿ ಕೇಳಿದರೆ ಮಾತ್ರ ತೆಗೆದುಕೊಡುವಂತೆಯೂ ಅಲ್ಲಿಯವರೆಗೆ ಹಣವನ್ನು ಮುಟ್ಟಬಾರದೆಂದು ತಿಳಿಸಿ ನೆರಳು ಸಾಕ್ಷಿಯಾದ ಶ್ರೀ ಅನೀಲ್‌ರವರಿಗೆ ದೂರುದಾರರೊಂದಿಗೆ ಎದುರುದಾರರನ್ನು ಕಾಣಲು ಹೋಗಿ ಅಲ್ಲಿಯೇ ಹತ್ತಿರದಲ್ಲಿ ನಿಂತು ದೂರುದಾರ ಮತ್ತು ಎದುರುದಾರರ ನಡುವೆ ನಡೆಯುವ ಎಲ್ಲಾ ವಿದ್ಯಾಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿ ನೋಡಿ ಸಂಭಾಷಣೆ ಕೇಳಿಸಿಕೊಂಡು ನಂತರ ತನಿಖಾಧಿಕಾರಿಯವರು ಕೇಳಿದಾಗ ತಿಳಿಸಬೇಕೆಂದು ಸೂಚಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ

ಎದುರುದಾರರು ಲಂಚದ ಹಣವನ್ನು ಯಾರ ಹತ್ತಿರ ಕೊಡು ಎನ್ನುತ್ತಾರೆ ಅಥವಾ ಎಲ್ಲಿ ಇಡು ಎಂದು ಹೇಳುತ್ತಾರೆ, ಲಂಚದ ಹಣವನ್ನು ಸ್ವೀಕರಿಸಿದ ಬಳಿಕ ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿಕೊಂಡು ನಂತರ ಹೊರ ಬಂದು ತಮ್ಮ ಮುಖವನ್ನು ಕರವಸ್ತ್ರದಿಂದ ವರೆಸಿಕೊಳ್ಳುವ ಮೂಲಕ ಅಲ್ಲಿಯೇ ಮರೆಯಲ್ಲಿ ನಿಂತಿರುವ ತಮಗೆ ಸನ್ನೆ ನೀಡುವಂತೆ ಸೂಚಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎಲ್ಲರಿಗೂ ಸೋಪಿನಿಂದ ಕೈಗಳನ್ನು ತೊಳೆದುಕೊಳ್ಳಲು ತಿಳಿಸಿ ತಾನೂ ಸಹ ಸೋಪಿನಿಂದ ಕೈಗಳನ್ನು ತೊಳೆದುಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 09/02/2018 ರಂದು ಬೆಳಿಗ್ಗೆ 10–45 ಘಂಟೆಯಿಂದ 11–30 ಘಂಟೆಯವರೆಗೆ ಬೀದರ ಎಸಿಬಿ ಕಛೇರಿಯಲ್ಲಿ ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

V. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಹೊರಟು ಎದುರುದಾರರು ಕಾರ್ಯನಿರ್ವಹಿಸುವ ಬಸವಕಲ್ಯಾಣ ನಗರದ ಮಿನಿ ವಿಧಾನಸೌಧ ಕಟ್ಟಡದಲ್ಲಿರುವ ತಾಲ್ಲೂಕು ಉಪಖಜಾನೆಯ ಕಛೇರಿ ಹತ್ತಿರ ಹೋಗಿ ವಾಹನವನ್ನು ಮರೆಯಾಗಿ ನಿಲ್ಲಿಸಿ ತನಿಖಾಧಿಕಾರಿಗಳು ದೂರುದಾರರಿಗೆ ಮತ್ತು ನೆರಳು ಸಾಕ್ಷಿ ಶ್ರೀ ಅನೀಲ್‌ರವರಿಗೆ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ನೀಡಿದ ಸೂಚನೆಗಳನ್ನು ಮರು ಜ್ಞಾಪಿಸಿ ಕಳುಹಿಸಿದ್ದು ದೂರುದಾರರು ಸದರಿ ಮಿನಿವಿಧಾನ ಸೌಧ ಕಟ್ಟಡದಲ್ಲಿರುವ ತಾಲ್ಲೂಕು ಉಪ ಖಜಾನೆ ಕಛೇರಿಯಲ್ಲಿದ್ದ ಎದುರುದಾರರನ್ನು ಭೇಟಿಯಾಗಿ ತಮ್ಮ ಕಛೇರಿಯ ಸಿಬ್ಬಂಧಿಯವರ ಎಕ್ಸಟ್ರಾ ಸಾಲರಿ ಬಿಲ್ ಬಗ್ಗೆ ವಿಚಾರಿಸಿದಾಗ ಎದುರುದಾರರು ಈ ಹಿಂದೆ ತಿಳಿಸಿದಂತೆ 7,000/– ರೂ.

ತಂದಿರುವೆಯಾ ಎಂದು ಕೇಳಿರುತ್ತಾರೆ. ಆಗ ದೂರುದಾರರು ಹೌದು ಸರ್, ತಂದಿರುತ್ತೇನೆ ಎಂದು ತಿಳಿಸಿ ಪಿನಾಪ್ತಲಿನ್ ಪುಡಿ ಲೇಪಿತ ರೂ. 7,000/- ಗಳನ್ನು ನೀಡಿದಾಗ ಎದುರುದಾರರು ದೂರುದಾರರಿಗೆ ಹಣವನ್ನು ಟೇಬಲ್ ಮೇಲೆ ಇಡುವಂತೆ ತಿಳಿಸಿರುತ್ತಾರೆ. ಆಗ ದೂರುದಾರರು ಸದರಿ ಹಣವನ್ನು ಟೇಬಲ್ ಮೇಲೆ ಇಟ್ಟಾಗ ಎದುರುದಾರರು ಅವರ ಕಛೇರಿಯ ಸಿಬ್ಬಂಧಿ ಶ್ರೀ ಖಾಸಿಂ ಸಾಬ್ ಎಂಬುವವರಿಗೆ ಸಿಬ್ಬಂಧಿಯವರ ಸಾರ್ವತ್ರಿಕ ರಜಾ (30) ದಿನಗಳ ಸಂಬಳದ ಚೆಕ್ ನೀಡಲು ತಿಳಿಸಿದಾಗ ದೂರುದಾರರು ಖಾಸಿಂ ಸಾಬ್ ರವರಿಂದ ಚೆಕ್ಕನ್ನು ಪಡೆದುಕೊಂಡು ಕಛೇರಿಯಿಂದ ಹೊರ ಬರುವಾಗ ಎದುರುದಾರರ ಕಡೆಗೆ ಹಿಂತಿರುಗಿ ನೋಡಿರುತ್ತಾರೆ. ಆಗ ಎದುರುದಾರರು ದೂರುದಾರರು ನೀಡಿದ ಲಂಚದ ಹಣವನ್ನು ಟೇಬಲ್ ಮೇಲಿಂದ ತೆಗೆದುಕೊಂಡು ತಮ್ಮ ಶರ್ಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಸ್ವಲ್ಪ ಹೊತ್ತಿನ ನಂತರ ದೂರುದಾರರು ಎದುರುದಾರರ ಕಛೇರಿಯಿಂದ ಹೊರ ಬಂದು ಈ ಮೊದಲೇ ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ಸೂಚಿಸಿದಂತೆ ತಮ್ಮ ಮುಖವನ್ನು ಅವರ ಹತ್ತಿರವಿದ್ದ ಕರವಸ್ತ್ರದಿಂದ ವರೆಸಿಕೊಳ್ಳುವುದರ ಮೂಲಕ ಮರೆಯಲ್ಲಿ ನಿಂತಿದ್ದ ಸಿಬ್ಬಂದಿಯವರಿಗೆ ಸಂಜ್ಞೆ ನೀಡಿರುತ್ತಾರೆ. ಆಗ ತನಿಖಾಧಿಕಾರಿಗಳು ಅಲ್ಲಿಗೆ ಬಂದು ಎದುರುದಾರರಿಗೆ ತಮ್ಮ ಪರಿಚಯ ಮಾಡಿಸುತ್ತಾರೆ. ನಂತರ ನೆರಳು ಸಾಕ್ಷಿರವರಿಗೆ ತನಿಖಾಧಿರಿಯವರು ವಿಚಾರಿಸಲಾಗಿ ಅವರು ತಾನು ದೂರುದಾರರ ಹಿಂದೆ ಹಿಂಬಾಲಿಸಿಕೊಂಡು ಹೋಗಿ ಎದುರುದಾರರ ಕಛೇರಿಯ ಛೇಂಬರಿನ ಹತ್ತಿರ ಸ್ವಲ್ಪ ದೂರದಲ್ಲಿ ನಿಂತುಕೊಂಡಿದ್ದು ಎದುರುದಾರರು ಮತ್ತು ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡಿದ್ದು ಹಾಗೂ ಅಲ್ಲಿನ ಘಟನೆಯನ್ನು ನೋಡಿರುತ್ತೇನೆ ಎಂದು ನುಡಿದಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರ

ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ, ಬಣ್ಣ ರಹಿತವಾದ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎದುರುದಾರರ ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ, ಬಣ್ಣ ರಹಿತವಾದ ದ್ರಾವಣವು ನಸು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಸ್ವೀಕರಿಸಿದ ಲಂಚದ ಹಣವನ್ನು ಎಲ್ಲಿ ಇಟ್ಟುಕೊಂಡಿದ್ದೀರಾ ಎಂದು ಕೇಳಿದ್ದಕ್ಕೆ ಅವರು ತಮ್ಮ ಶರ್ಟಿನ ಎಡ ಎದೆಯ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದಾಗ ಪಂಚ ಸಾಕ್ಷಿ ಮಹಾಂತೇಶ್ ರವರ ಮೂಲಕ ಎದುರುದಾರರು ಧರಿಸಿಕೊಂಡಿದ್ದ ಶರ್ಟಿನ ಎಡ ಎದೆಯ ಜೇಬಿನಲ್ಲಿಯ ಹಣವನ್ನು ತೆಗೆದಿದ್ದು ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ದೂರುದಾರರಿಗೆ ನೀಡಿದ ಕರೆನ್ಸಿ ನೋಟುಗಳ ಮೌಲ್ಯ ಮತ್ತು ನಂಬರ್‌ಗಳು ಹೋಲಿಕೆಯಾಗುತ್ತಿದೆಯೇ ಎಂದು ಪರಿಶೀಲಿಸಿ ಹೇಳುವಂತೆ ತನಿಖಾಧಿಕಾರಿಯವರು ತಿಳಿಸಿದ್ದರಿಂದ ಪಂಚರು ಸದರಿ ನೋಟುಗಳನ್ನು ಪರಿಶೀಲಿಸಿ ನೋಡಿದಾಗ ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಾಗಿದ್ದ ನೋಟುಗಳು ಮತ್ತು ಅವುಗಳ ಕ್ರಮ ಸಂಖ್ಯೆಗೆ ಸರಿಯಾಗಿ ತಾಳೆಯಾಗುತ್ತದೆ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಬೇರೆ ಶರ್ಟಿನ ವ್ಯವಸ್ಥೆ ಮಾಡಿ ಎದುರುದಾರರು ಲಂಚದ ಹಣವನ್ನು ಇಟ್ಟುಕೊಂಡಿದ್ದ ಶರ್ಟನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಬೇಕಾಗಿರುವುದರಿಂದ ಸದರಿ ಶರ್ಟನ್ನು ತೆಗೆದು ಪರಿಶೀಲಿಸಿ ಸದರಿ ಶರ್ಟಿನ ಎಡ ಎದೆಯ ಜೇಬನ್ನು ಒಳ ಮುಖ ಮಾಡಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ, ಬಣ್ಣ ರಹಿತವಾದ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ

ದೂರುದಾರರಿಗೆ ಎದುರುದಾರರು ಲಂಚ ಪಡೆಯುವಾಗ ನಡೆಯುವ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಳ್ಳಲು ತಿಳಿಸಿ ಕೊಟ್ಟಿದ್ದ ವಾಯ್ಸ್ ರೆಕಾರ್ಡರನ್ನು ದೂರುದಾರರು ಹಾಜರುಪಡಿಸಿದ್ದು ಅದನ್ನು ಪಂಚರ ಮುಂದೆ ನುಡಿಸಿ ನೋಡಿದಾಗ ಅದರಲ್ಲಿ ಲಂಚದ ಹಣದ ಬಗ್ಗೆ ಸಂಭಾಷಣೆಯು ದಾಖಲಾಗಿರುತ್ತದೆ. ತನಿಖಾಧಿಕಾರಿಗಳು ಎದುರುದಾರರಿಗೆ ಸ್ವ ಇಚ್ಛಾ ಹೇಳಿಕೆಯನ್ನು ಬರೆದುಕೊಡಲು ಹೇಳಿದ ಮೇರೆಗೆ ಅವರು ತಮ್ಮ ಸ್ವ ಇಚ್ಛಾ ಹೇಳಿಕೆ ಬರೆದುಕೊಟ್ಟಿದ್ದು ಅದರಲ್ಲಿ "ತಾನು ಯಾವುದೇ ಲಂಚದ ಹಣ ಸ್ವೀಕರಿಸಿರುವುದಿಲ್ಲವೆಂದು ಮತ್ತು ಈಗಾಗಲೇ ದೂರುದಾರರಿಗೆ ಸಂಬಂಧಪಟ್ಟ ಬಿಲ್ ಪಾಸ್ ಮಾಡಿ ಚೆಕ್ ಸಿದ್ಧಪಡಿಸಿರುವುದಾಗಿ ಮತ್ತು ದೂರುದಾರರು ತಮ್ಮ ಕಛೇರಿಗೆ ಬಂದು ಟೇಬಲ್ ಮೇಲೆ ದುಡ್ಡು ಇಟ್ಟಿದ್ದು, ಸದರಿಯವರಿಗೆ ತಾನು ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲವೆಂದು ತನ್ನ 39 ವರ್ಷದ ಸೇವಾ ಅವಧಿಯಲ್ಲಿ ಬಿಲ್ ಪಾಸ್ ಮಾಡಲು ಯಾವುದೇ ವ್ಯಕ್ತಿಯಿಂದ ಲಂಚ ಪಡೆದಿಲ್ಲ" ಎಂದು ಬರೆದುಕೊಟ್ಟಿರುತ್ತಾರೆ. ಎದುರುದಾರರು ಬರೆದುಕೊಟ್ಟ ಸದರಿ ಸ್ವ ಇಚ್ಛಾ ಹೇಳಿಕೆಯನ್ನು ತನಿಖಾಧಿಕಾರಿಯವರು ಪಂಚರಿಗೆ ತೋರಿಸಿ ಅಭಿಪ್ರಾಯ ಕೇಳಿದ್ದು ಅವರು ಎದುರುದಾರರು ಬರೆದುಕೊಟ್ಟ ಸ್ವ ಇಚ್ಛಾ ಹೇಳಿಕೆಯು ಸುಳ್ಳೆಂಬ ಅಭಿಪ್ರಾಯಕ್ಕೆ ಬಂದಿರುತ್ತಾರೆ. ಅದೇ ರೀತಿ ಎದುರುದಾರರ ಸ್ವ ಇಚ್ಛಾ ಹೇಳಿಕೆಯನ್ನು ದೂರುದಾರರಿಗೆ ತೋರಿಸಿ ಓದಿ ಹೇಳಿದ್ದು ಆಗ ದೂರುದಾರರು ಸ್ವ ಇಚ್ಛಾ ಹೇಳಿಕೆ ಸುಳ್ಳು ಇದ್ದು ಎದುರುದಾರರು ತನಗೆ ಸಿಬ್ಬಂದಿಯವರ 15/30 ದಿವಸಗಳ ಎಕ್ಸ್ಟ್ರಾ ಸ್ಯಾಲರಿ ಮಾಡಿ ಚೆಕ್ ಪಾಸ್ ಮಾಡಲು ರೂ. 7,000/-ಗಳ ಲಂಚದ ಹಣಕ್ಕೆ ಒತ್ತಾಯಿಸಿ ತನ್ನಿಂದ ಸ್ವೀಕರಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಸದರಿ ಸ್ವ ಇಚ್ಛಾ ಹೇಳಿಕೆಯ ಮೇಲೆ ಪಂಚರ,

ದೂರುದಾರರ ಸಹಿ ಪಡೆದು ತಾನೂ ಸಹ ಅದಕ್ಕೆ ಸಹಿ ಮಾಡಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

vi. ಎದುರುದಾರರಿಗೆ ದಿನಾಂಕ 19/07/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಸಿ ಕೇಳಲಾಗಿತ್ತು.

vii. ಎದುರುದಾರರು ತಮ್ಮ ಸಮಜಾಯಿಸಿಯನ್ನು ದಿನಾಂಕ 10/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಸಿಯನ್ನು ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಸಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

3) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರು ತಮ್ಮ ಕಛೇರಿಯ ಸಿಬ್ಬಂದಿರವರುಗಳ ವೇತನ ಬಿಲ್ಲನ್ನು ದಿ: 30/01/2018 ರಂದು ಸಿದ್ದಪಡಿಸಿಕೊಂಡು ದಿ: 31/01/2018 ರಂದು ಉಪಖಜಾನೆ ಬಸವ ಕಲ್ಯಾಣರವರಲ್ಲಿ ಸಲ್ಲಿಸಿದ್ದು ಅದಕ್ಕೆ ಉಪ ಖಜಾನೆ ಅಧಿಕಾರಿಯಾದ ಎದುರುದಾರರು ಸದರಿ ಬಿಲ್ಲು 7 ಜನ ಅರಣ್ಯ ಇಲಾಖೆ ಸಿಬ್ಬಂಧಿಯವರದು ಇರುತ್ತದೆ ಎಂದು ತಿಳಿದುಕೊಂಡು ಪ್ರತಿಯೊಬ್ಬರಿಂದ ರೂ. 1,000/- ಗಳಂತೆ ಒಟ್ಟು ರೂ. 7,000/-ಗಳು ಲಂಚದ ಹಣ ಜಮಾ ಮಾಡಿ ತಂದುಕೊಟ್ಟರೆ ಚೆಕ್ ಪಾಸ್ ಮಾಡ್ತೀನಿ ಎಂದು ತಿಳಿಸಿರುತ್ತಾರೆ. ಆಗ ದೂರುದಾರರು ಅಷ್ಟೊಂದು ಹಣ ಯಾವ ಕಾರಣಕ್ಕಾಗಿ ಕೊಡಬೇಕು ಮತ್ತು ಇದರ ಕುರಿತು ರಸೀದಿ ವಗೈರೆ ಏನಾದರೂ ಕೊಡುತ್ತೀರಾ ಎಂದು ಕೇಳಿದಾಗ ಎದುರುದಾರರು ಸದರಿ ಹಣಕ್ಕೆ ಯಾವುದೇ ರಸೀದಿ ಇರುವುದಿಲ್ಲ. ಅಷ್ಟು ಹಣ ನೀಡಿದರೆ ಮಾತ್ರ ಬೇಗನೆ ಚೆಕ್ ಪಾಸ್ ಮಾಡಿ ಕೊಡ್ತೀನಿ ಎಂದು ತಿಳಿಸಿರುತ್ತಾರೆ. ಈ ಕುರಿತು ದೂರುದಾರರು ದಿ: 06/02/2018 ರಂದು ಮತ್ತೊಮ್ಮೆ ಎದುರುದಾರರವರಲ್ಲಿ ಹೋಗಿ ಕಛೇರಿಯ ಸ್ಟಾಫ್‌ನ ಎಕ್ಸಾಟ್ರ ಸ್ಯಾಲರಿ ಏನಾಯಿತು ಎಂದು ವಿಚಾರಿಸಿದಾಗ ಎದುರುದಾರರು 7,000/- ರೂ.ಗಳ ಲಂಚದ ಹಣಕ್ಕಾಗಿ

ಬೇಡಿಕೆ ಇಟ್ಟು ದಿ: 09/02/2018 ರಂದು ದೂರುದಾರರಿಂದ ಲಂಚದ ಹಣವಾದ ರೂ. 7,000/-ಗಳನ್ನು ಕೇಳಿ ಪಡೆದುಕೊಂಡು, ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ದೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

4) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಸೈಯದ್ ಅಹ್ಮದುಲ್ಲಾ ತಂದೆ ಸೈಯದ್ ಅಸದುಲ್ಲಾ, ಸಹಾಯಕ ಖಜಾನೆ ಅಧಿಕಾರಿ ಪ್ರಭಾರ ಸಹಾಯಕ ನಿರ್ದೇಶಕರು, ಉಪ-ಖಜಾನೆ ಕಛೇರಿ ಬಸವಕಲ್ಯಾಣ, ಜಿ: ಬೀದರ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

5) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/11/21

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.